ನಾಗಶ್ರೀ ದೇವರೆದುರು ಮಂಡಿಯೂರಿ ಕೂತಳು.

'ನೋಡಿ, ನನ್ನ ನಂಬೋದು, ಬಿಡೋದು ನಿಮಗೆ ಬಿಟ್ಟಿದ್ದು. ಮಕ್ಕಳ ಹತ್ರ ಈ ಸುದ್ದಿ ಬಾಯ್ಬಿಟ್ಟಿಲ್ಲ ನಾನು. ಅವಕ್ಕೆ ಎಂತದೂ ಗೊತ್ತಿಲ್ಲ. ಇಲ್ದಿದ್ರೆ ನಿಮ್ಹತ್ರ ಸಲೀಸಾಗಿ ನಡ್ಕೋತಿದ್ವಾ ಅವು?'

'ಸದ್ಯ, ಅಷ್ಟ್ರಮಟ್ಟಿಗೆ ಮರ್ಯಾದೆ ಉಳ್ಸಿದೀಯಲ್ಲ, ಸಾಕು. ಪಾವನವಾಯ್ತು ನನ್ನ ಜನ್ಮ..'

..

'ಹಿತ್ತಾಳೆ ಕಿವಿ ಅಂತ ಕೇಳಿದೀನಿ. ಆದ್ರೆ ಇವತ್ತು ಪ್ರತ್ಯಕ್ಷ ಕಂಡ ಹಾಗಾಯ್ತು. ಸರಿ, ನಾನಿನ್ನು ಹೊರಡ್ತೀನಿ. ಇನ್ನ್ಯಾವತ್ತೂ ನಿಂಗೆ ತೊಂದ್ರೆ ಕೊಡಲ್ಲ..'

ಧಿಗ್ಗನೆದ್ದ ನಾಗಶ್ರೀ ಅವನ ಕೈ ಹಿಡಿದು ತಡೆದಳು.

'ಇಷ್ಹೊತ್ನಲ್ಲಿ ಎಲ್ಲಿಗೆ ಹೋಗ್ತೀರಿ? ಈಗ ಬಸ್ಸೆಲ್ಲಿರುತ್ತೆ?' ಅಂದಳು.

'ಅದೆಲ್ಲಾ ಕಟ್ಕಂಡು ನಿಂಗೇನಾಗ್ಬೇಕಾಗಿದೆ? ನನ್ನ ಪಾಡು ನಂಗೆ..' ಕೈ ಕೊಸರಿಕೊಂಡ ರಾಮಚಂದ್ರ.

'ತಪ್ಪಾಯ್ತು ಕಣ್ರೀ, ಸಾವಿರ ಸರ್ತಿ ತಪ್ಪಾಯ್ತು. ನೀವು ಇಂತಾ ಕೆಲಸ ಮಾಡಿದ್ರಿ ಅಂತ ನಂಬ್ಕಂಡು ನಿಮ್ಮನ್ನ ಶಾಶ್ವತವಾಗಿ ದೂರ ಮಾಡ್ಕಂಬಿಟ್ಟೆ. ಅವತ್ತು ಮನೆಬಾಗ್ಲಿಗೆ ನೀವು ಬಂದಾಗ ಬಾಗಿಲು ತೆಗೀದಿದ್ದಿದ್ದು ಮತ್ತೆಂತಕ್ಕೆ ಅಂದ್ಕಂಡಿದೀರಿ? ಇಂತಾದ್ದೊಂದು ಸುದ್ದಿ ಗೊತ್ತಾದ ಹೊಸ್ತು. ನನ್ನ ರಕ್ತ ಕುದೀತಿತ್ತು..'

..

'ಪುಟ್ಟಿ ಮನೇಲಿದ್ದಿದ್ರೆ ಕತೆ ಬೇರೆ ಆಗ್ತಿತ್ತೇನೋ. ಅಪ್ಪ ಬಂದಾಗ ಬಾಗಿಲು ತೆಗೀಲಿಲ್ಲ ಅಂದ್ರೆ ಅದು ಸುಮ್ನೆ ಬಿಡ್ತಿತ್ತಾ? ಪಾಪುದ್ದು, ಇಸ್ಕೂಲಿಗೆ ಹೋಗಿತ್ತು..'

..

'ನೀವು ಅಷ್ಟು ದೂರದಲ್ಲಿ ಬರ್ತಿದ್ದಿದ್ದು ಕಂಡು ನನ್ನ ಸಿಟ್ಟು ಏರಿ ಹೋಯ್ತು. ನಿಮ್ಮ ಮಕ ಕೂಡಾ ನೋಡ್ಬಾರ್ದು ಅಂತ ಬಾಗಿಲು ಹಾಕಿಟ್ಟಿದ್ದು ನಾನೇ..'

'ಅದರ ಪರಿಣಾಮ ಏನಾಯ್ತೂಂತ ಗೊತ್ತಾಯ್ತಲ್ವಾ? ಮುರಿದೇಹೋಯ್ತು ನನ್ನ ಮನಸ್ಸು..'

'ತಪ್ಪಾಯ್ತು, ತಪ್ಪಾಯ್ತು. ಅವತ್ತೇ ನಿಮ್ಮ ಹತ್ರ ಎದುರಾಎದುರು ನಿಂತು ಮಾತಾಡಿದ್ರೆ ಎಲ್ಲಾ ಸಮಸ್ಯೆ ಪರಿಹಾರ ಆಗ್ತಿರ್ತಿತ್ತೇನೋ. ಕರ್ಮ ನಂದು. ಸಿಟ್ಟು ವಿಪರೀತ ಜಾಸ್ತಿ ನಂಗೆ. ನನ್ನಂತೋಳನ್ನ ಕೈ ಬಿಟ್ಟು ಯಾರೋ ಕೆಲಸಕ್ಕೆ ಬರೋಳನ್ನ ಹತ್ರ ಬಿಟ್ಕಂಡ್ರಿ ಅಂತ ಮೈ ಉರಿದು ಹೋಗಿತ್ತು ನಂಗೆ..'

'ಅಲ್ವೇ, ನೀನೇ ಯೋಚ್ನೆ ಮಾಡು. ಮನೇಲಿ ಒಬ್ಬ ಇರೋದು. ಅಮ್ಮ ಹಾಸಿಗೆ ಮೇಲೆ. ಹಳ್ಳಿಮನೆ ಕೆಲಸ ಅಂದ್ರೆ ಪುಗಸಟ್ಟೆ ಆಗುತ್ತಾ? ಯಾರೋ ಒಬ್ರನ್ನ ನಂಬ್ಕಂಬೇಕು ತಾನೇ? ಅವಳಿಗೂ ಗಂಡ, ಮಕ್ಳು ಇದಾರೆ ಕಣೇ. ಗಂಡ ಕುಡುಕ ಆಗಿರ್ಬೋದು, ಅಂತೋರೇ ಅನುಮಾನ ಬಂದ್ರೆ ರಾಕ್ಷಸರಾಗೋದು. ಇವತ್ತಿಗೂ ಅವಳು ನಮ್ಮನೇಲಿ ಗೆಯ್ತಿದಾಳೆ ಅಂದ್ರೆ ಯೋಚ್ನೆ ಮಾಡು..'

ರಾಮಚಂದ್ರ ಆಡುತ್ತಿರುವ ಪ್ರತಿ ಪದದಲ್ಲೂ ಅರ್ಥ ಇದೆ. ಯಾವ ಅನುಮಾನದ ಭೂತ ತನ್ನ ತಲೆ ಕೆಡಿಸಿಟ್ಟಿತ್ತು? ಪಶ್ಚಾತ್ತಾಪ ದಗ್ಧ ದನಿಯಲ್ಲಿ ಉಸುರಿದಳು ನಾಗಶ್ರೀ,

'ಹಂಗಾರೆ ಅದ್ಯಾವ ಮನೆಮುರುಕರು ಕಾಗದ ಬರೆದು ಹಾಕಿದ್ದು ಕಣ್ರೀ? ನಮ್ಮ ಸಂಸಾರಾನ ಒಡೆದು ಪುಣ್ಯ ಕಟ್ಕಂಡಿದ್ದು?'

'ಯಾರು ಬರೆದಿದ್ದು ಕಾಗದ?'

'ಯಾರೋ ಹೆಸರಿಲ್ಲ. ಹಿತೈಷಿಗಳು ಅಂತ ಇತ್ತಪ್ಪಾ. ಇನ್ನು ನಿಮ್ಮ ಗಂಡನ ಆಸೆ ಬಿಟ್ಬಿಡಿ. ಅವರು ಬೇರೆ ವ್ಯವಸ್ಥೆ ಮಾಡ್ಕಂಡಿದಾರೆ ಅಂತ ಅವಳ ಹೆಸರು ಸಮೇತ ಇಷ್ಟುದ್ದ ಬರೆದಿದ್ರು, ಸತ್ಯದ ತಲೇ ಮೇಲೆ ಹೊಡೆದ ಹಾಗೆ..'

ರಾಮಚಂದ್ರ ಅಸಹಾಯಕ ಕ್ರೋಧದಿಂದ ಕುದಿಯತೊಡಗಿದ.

ಇಂತಾ ಹೇಲು ತಿನ್ನುವ ಕೆಲಸ ಮಾಡಿದವರು ಯಾರು? ಒಬ್ಬರು ಉದ್ಧಾರವಾಗ್ತಿದಾರೆ ಅಂದ್ರೆ ಜನರಿಗೆ ಹೊಟ್ಟೆ ಉರಿಯೋದು ಸಹಜ. ಗಿಲೀಟಿನ ಮಾತಾಡುತ್ತಾ ಹತ್ತಿರ ಇದ್ದವರಲ್ಲೇ ಯಾರೋ ಬತ್ತಿ ಇಟ್ಟಿದ್ದರೂ ಆಶ್ಚರ್ಯ ಇಲ್ಲ. ಬಂಪರ್ ಹೊಡೀತು, ಬಂಪರ್ ಹೊಡೀತು.. ಅಂತ ಬಾರಿ ಬಾರಿ ತನ್ನ ಅದೃಷ್ಟದ ಕುರಿತು ಕರುಬುತ್ತಿದ್ದವರು? ಹೇಳುತ್ತಿದ್ದಾಳೆ ನಾಗಶ್ರೀ,

'ನಾನೇನು ಪೆದ್ದಂಭಟ್ರ ಥರ ಒಂದು ಕಾಗದಾನ ನಂಬ್ಕಂಡು ನಿಮ್ಮನ್ನ ದೂರ



## ಇಲ್ಲಿಯವರೆಗೆ

ರಾಮಚಂದ್ರನಿಗೆ ಅಡುಗೆಯಿಂದ ಹಿಡಿದು ಎಲ್ಲ ಕೆಲಸಗಳನ್ನು ಮಾಡಿಕೊಡುವಳು ರತ್ನ. ರಾಧಮ್ಮ ತೀರಿಕೊಂಡ ನಂತರ ಮನೆಗೆಲಸಗಳ ಸುಸೂತ್ರ ನಿರ್ವಹಣೆ ಅವಳದ್ದೇ. ರಾಧಮ್ಮ ಹಾಸಿಗೆ ಹಿಡಿದಾಗಲೂ ನಾಗಶ್ರೀ ನೋಡಲು ಬಂದಿರಲಿಲ್ಲ. ಊರವರೆಲ್ಲ ಆಡಿಕೊಳ್ಳ ಲಾರಂಭಿಸುತ್ತಾರೆ. ಈ ಮಧ್ಯೆ ಮಗಳ ನಿಶ್ಚಿತಾರ್ಥ ಕಳೆದು ಲಗ್ನಪತ್ರಿಕೆ ಕೊಡುವುದಕ್ಕಾಗಿ ಮಗ ಅನಂತ ಪದ್ಮನಾಭ ರಾಮಚಂದ್ರನ ಮನೆಗೆ ಬರುವುದಾಗಿ ಹೇಳುತ್ತಾನೆ. ಆಗ ಪೋಸ್ಟ್‌ನಲ್ಲೇ ಕಳಿಸಿಬಿಡು ಎನ್ನುತ್ತಾನೆ ರಾಮಚಂದ್ರ. ಮಗಳು ಪೂರ್ಣಿಮಾ ಫೋನ್ ಮಾಡಿ 'ಮದುವೆಗೆ ಬರ್ತೀಯಲ್ಲಪ್ಪಾ' ಎನ್ನುತ್ತಾಳೆ. ಅಂತೂ ಮದುವೆ ಸಂಭ್ರಮದಿಂದ ನೆರವೇರುತ್ತದೆ. ಮುಂದೆ ಪದ್ಮನಾಭನ ಪರೀಕ್ಷೆ ಫಲಿತಾಂಶ ಬರುತ್ತದೆ. ಅವನಿಗೆ ಇಂಜಿನಿಯರಿಂಗ್ ಓದಬೇಕು ಎಂಬ ಆಸೆ. ನಾಗಶ್ರೀ ಒಪ್ಪದೇ ಇದ್ದಾಗ ರಾಮಚಂದ್ರನ ಬಳಿ ಹೋಗಿ 'ಅಮ್ಮನನ್ನು ಹೇಗಾದರೂ ಒಪ್ಪಿಸಬೇಕು' ಎಂದು ಅಪ್ಪನ ಮೊರೆ ಹೋಗುತ್ತಾನೆ ಅನಂತ ಪದ್ಮನಾಭ

ಮಾಡ್ಕಂಡಿದ್ದಲ್ಲ ಕಣ್ರೀ. ಸಂಭಾವನೆಗೆ ಅಂತ ಅಲ್ಲಿಗೆ ಬಂದು, ಇಲ್ಲಿಗೂ ಬರ್ತಿದ್ರಲ್ಲ, ಅವರ ಬಾಯಿ ಬಿಡಿಸಿ ಸುದ್ದಿ ಒಟ್ಟು ಮಾಡ್ದೆ. ಹೀಗೊಬ್ಳು ಮನೆಯ ಒಳಗೆ, ಹೊರಗೆ ಮನೆಯೋರಿಗಿಂತಾ ಹೆಚ್ಚಾಗಿ ಓಡಾಡ್ಕಂಡು ಗೆಯ್ಕಂಡಿದಾಳೆ ಅಂತ ಗೊತ್ತಾಯ್ತು. ನಂಗೆ ಹೆಂಗಾಗಿರ್ಬೇಕು, ನೀವೇ ಹೇಳಿ..'

'ಆದ್ರೂ ತಪ್ಪು ಮಾಡ್ದೆ ನೀನು. ಹೋಗಿ ರಾಜಿ ಮಾಡ್ಕಂಡು ಬಾ ಅಂತ ಅಮ್ಮ ಉಡದ ಹಾಗೆ ಹಿಡ್ಕಂಬಿಟ್ಟಿದ್ಲು. ನಿನ್ನ ನಂಬ್ಕಂಡು ಬಂದ್ರೆ..'

ನಾಗಶ್ರೀ ಇನ್ನೊಂದು ಒಬ್ಬೆ ಅತ್ತಳು.

'ಅಪ್ಪ, ಅಮ್ಮ ಇದೇ ತಲೇಲಿಟ್ಕಂಡು ಕೊರಗ್ತಿದ್ರು ಕಣ್ರೀ. ನಿನ್ನಿಂದ ಹೀಗಾಯ್ತು ಅಂತ ಅಪ್ಪ, ನಿಮ್ಮಿಂದ ಹೀಗಾಯ್ತು ಅಂತ ಅಮ್ಮ. ಕೊನೆಕೊನೇಗೆ ಮಾತಾಡಿದ್ರೆ ಸಾಕು, ಇಬ್ರಲ್ಲೂ ಜಗಳ ಹತ್ಕಂತಿತ್ತು. ಇನ್ಮೇಲೆ ನೀವಿಬ್ರೂ ಮಾತಾಡ್ಬೇಡಿ ಅಂತ ನಾನೇ ಕಟ್ಟುನಿಟ್ಟು ಮಾಡಿದ್ದೆ..'

'ಚೆನ್ನಾಗುಂಟು ಕತೆ. ಬೆಳೆಯೋ ಮಕ್ಕಳ ಎದುರು ಒಳ್ಳೇ ಆದರ್ಶ..'

'ಇಲ್ಲ ಕಣ್ರೀ, ಅದೊಂದು ನಡೀಲಿಲ್ಲ ಈ ಮನೇಲಿ. ಮಕ್ಕಳು ಇಸ್ಕೂಲಿಗೆ ಹೋದಾಗಷ್ಟೇ ಎಲ್ಲಾ ಪುರಾಣ ಶುರುವಾಗ್ತಿದ್ದಿದ್ದು..'

'ಅಷ್ಟಾರೂ ಬುದ್ಧಿ ಇತ್ತಲ್ಲ..'

'ಇವತ್ತಿಗೂ ಸಾಕ್ಷಿಗೆ ಇರ್ಲಿ ಅಂತ ಆ ಕಾಗದ ಜೋಪಾನ ಮಾಡಿ ಇಟ್ಕಂಡಿದೀನಿ, ಮಕ್ಕಳ ಕಣ್ಣಿಗೆ ಬೀಳ್ದಿದ್ದಂಗೆ. ಬೇಕಾರೆ ತೋರಿಸ್ತೀನಿ. ಇನ್ಲೆಂಡ್ ಲೆಟರು..'

'ಜೇನುತುಪ್ಪ ಹಾಕಿ ನೆಕ್ಕು ಅದನ್ನ.. 'ಅಂದ ರಾಮಚಂದ್ರ.

ಉಬ್ಬರದ ಒಂದು ಸುನಾಮಿಯಂತಹಾ ಅಲೆ ಮೇಲೆದ್ದು ಶಾಂತವಾಗುವಂತೆ ಇಬ್ಬರ ಎದೆಯಲ್ಲಿ ಕಲ್ಲೋಲ ಎಬ್ಬಿಸಿದ್ದ ಸಂಗತಿಗಳೆಲ್ಲಾ ಮಾತಲ್ಲಿ ವ್ಯಕ್ತವಾಗಿ ಪರಿಸ್ಥಿತಿ ತಿಳಿಯಾಗುತ್ತಾ ಬಂತು. ಇನ್ನೊಬ್ಬರಿಗೆ ಯಾವ ಕಾರಣಕ್ಕೂ ಬಿಟ್ಟು ಕೊಡಲಾರೆ ಎನ್ನುವ ಸೆಳೆತವಿರುವಲ್ಲಿ, ಇವನು ತನ್ನವನೆನ್ನುವ ಭಾವ ತೀವ್ರವಾಗಿರುವಲ್ಲಿ, ಸಂದೇಹವೂ ಹೆಚ್ಚಿರುತ್ತದೆ ಎನ್ನುವ